ಶಾಲೆಯಲ್ಲಿ ಚೆನ್ನಾಗಿ ಓದುತ್ತಿದ್ದ, ಒಳ್ಳೆಯ ಮೇಷ್ಟ್ರುಗಳ ದೆಸೆಯಿಂದ ಆದರ್ಶ ಗುಣಗಳನ್ನು ಬೆಳೆಸಿಕೊಂಡಿದ್ದ ಹುಡುಗ ಮುರುಗೇಶನಿಗೆ ಅವಮಾನವಾದಂತಾಗಿತ್ತು. ಅಪ್ಪ ಹೊಡೆದಿದ್ದಕ್ಕಲ್ಲ. ತನ್ನನ್ನು ಕಳ್ಳ ಎಂದನಲ್ಲ ಎಂದು ಬೇಸರ ಸಿಟ್ಟು ಎಲ್ಲಾ ಒತ್ತಟ್ಟಿಗೆ ಬಂದವು. ದುಮುಗುಡುತ್ತಲೇ ಶೆಟ್ಟರ ಅಂಗಡಿಗೆ ಹೋಗಿ 'ಅಪ್ಪ ಕೊಟ್ಟ ದುಡ್ಡನ್ನ ನಾನು ಎಣಿಸದೆ ಹಾಗೆಯೇ ಚಡ್ಡಿ ಜೋಬಿಗೆ ಹಾಕಿಕೊಂಡು ಬಂದಿದ್ದೆ, ನಿಮಗೆ ಅಷ್ಟನ್ನೂ ತೆಗೆದುಕೊಟ್ಟೆ. ಕಡಿಮೆ ಹೇಗೆ ಬಂತು?' ಎಂದು ಕೇಳಿದ. ಶೆಟ್ಟರಿಗೆ ಮತ್ತೂ ಪಿತ್ತ ನೆತ್ತಿಗೆ ಏರಿತು. 'ಏನೋ ನನ್ನನ್ನೇ ಅನುಮಾನಿಸ್ತೀಯೇನೋ' ಎನ್ನುತ್ತಾ ಹೊಡೆಯಲು ಕೈಯೆತ್ತಿದ್ದರು. ಮುರುಗೇಶ ತಪ್ಪಿಸಿಕೊಂಡು ಮನೆಯತ್ತ ಓಡಿ ಬಂದಿದ್ದ. ಅವನ ಮನಸ್ಸು ವ್ಯಗ್ರವಾಗಿತ್ತು. ತನ್ನದೇನೂ ತಪ್ಪಿಲ್ಲದಿದ್ದರೂ ಈ ಇಬ್ಬರು ನನ್ನನ್ನು ಇಷ್ಟು ಹೀನಾಯವಾಗಿ ನೋಡ್ತಿದಾರಲ್ಲ ಎಂದು ಕೋಪವೂ ಬಂತು. ಮನಸ್ಸಿಗೆ ಘಾಸಿಯಾಗಿದ್ದೂ, ಅಪ್ಪ ಹೊಡೆದ ಏಟುಗಳ ನೋವು ಎರಡೂ ಸೇರಿ ರಾತ್ರಿ ಮಲಗಿದರೆ ನಿದ್ದೆಯೂ ಬರಲಿಲ್ಲ. 'ಇರಲಿ ಇವರಿಗೆ ಬುದ್ಧಿ ಕಲಿಸ್ತೀನಿ' ಎಂದುಕೊಂಡವನೇ ಬೆಳಕು ಹರಿಯುವ ಮೊದಲೇ ಎದ್ದು ರೈಲಿನ ಕಂಬಿಯ ಮೇಲೆ ಮಲಗಿಬಿಟ್ಟಿದ್ದ. ಹೈದರಾಬಾದಿಗೆ ಹೋಗುವ ಇಂಟರ್‌ಸಿಟಿ ರೈಲು ತನ್ನ ಪಾಡಿಗೆ ತಾನು ಗುರಿಯತ್ತ ಸಾಗಿತ್ತು.

ಪೆರುಮಾಳ್‌ನನ್ನು ಮಾತನಾಡಿಸಿ ಸಮಾಧಾನ ಹೇಳಿದಾಗ, ಪೊನ್ನುಸಾಮಿಯ ಬಳಿ ಅವನು ನಿನ್ನೆ ಆದದ್ದನ್ನೆಲ್ಲಾ ಹೇಳಿಕೊಂಡು ಅತ್ತ. ಪೊನ್ನುಸಾಮಿಗೆ ಶಾಕ್ ಆಯಿತು. 'ಅಯ್ಯೋ ದೇವ್ರೇ, ಈ ಹುಡುಗುನ್ ಸಾವಿಗೆ ನಾನೂ ಕಾರಣನಾದೆನಲ್ಲಾ' ಎಂದು ಪೇಚಾಡಿಕೊಂಡ. ಹೇಳಲಾಗದೆ, ಹೇಳದಿರಲಾಗದೆ ಒದ್ದಾಡಿದ.

ಪೊನ್ನುಸಾಮಿ ಹಿಂದಿನ ಸಂಜೆ ನೈಟ್ ಡ್ಯೂಟಿಗೆಂದು ಹೊರಟು, ಟಾರ್ಚ್ ಬೆಳಕಿನಲ್ಲಿ ಕಂಬಿಗಳನ್ನು ದಾಟುವಾಗ ಎರಡು ರೈಲು ಕಂಬಿಗಳ ಮಧ್ಯೆ ಏನೋ ಹೊಳೆದಂತೆ ಕಂಡಿತ್ತು. ಬಗ್ಗಿ ಕೈಗೆ ತೆಗೆದುಕೊಂಡು ನೋಡಿದರೆ, ಹೊಸಾ ಐನೂರರ ನೋಟು! ಲಾಟರಿ ಹೊಡೆದಂತಾಗಿತ್ತು ಅವನಿಗೆ. ಇವತ್ತು ಬೆಳಗ್ಗೆ ಯಾರ ಮುಖ ನೋಡಿದ್ದೆ ನಾನು ಎಂದು ನೆನಪಿಸಿಕೊಂಡ. ಇರಲಿ, ಖರ್ಚಿಗಾಯಿತು ಎಂದು ಒಮ್ಮೆ ಅಂದುಕೊಂಡ. ಯಾರದ್ದಿರಬಹುದು? ಕಳಕೊಂಡವರು ನಮ್ಮ ಕಾಲೋನಿಯವರೇ ಆಗಿರಲೂಬಹುದು, ಪಾಪ ಯಾರದ್ದೋ ಏನೋ? ಅವರಿಗೆ ಕೊಡುವುದು ಒಳ್ಳೆಯದು ಎಂದು ಅವನಿಗೆ ಅನ್ನಿಸಿದರೂ, ಯಾರನ್ನೆಂದು ಕೇಳುವುದು? ನನಗಲ್ಲದಿದ್ದರೆ ಮತ್ತೊಬ್ಬರಿಗೆ ಸಿಕ್ಕುತ್ತಿತ್ತು. ಡ್ಯೂಟಿಗೆ ಹೊತ್ತಾದರೆ, ಡೇ ಡ್ಯೂಟಿಯ ಆರ್ಮುಗ ಗಲಾಟೆ ಮಾಡುತ್ತಾನೆ. ಬೆಳಗ್ಗೆ ನೋಡೋಣ, ಯಾರಾದರೂ ಅವರಾಗೇ ಕಳಕೊಂಡಿದ್ದು ಹೇಳಿದರೆ ಕೊಟ್ಟರಾಯಿತು ಅಂದುಕೊಂಡು ಜೇಬಿಗೆ ಸೇರಿಸಿದ.

ಬೆಳಗಾಗುವ ವರೆಗೆ ಸಮಯವನ್ನೇ ಕೊಡದ ವಿಧಿ ಮುರುಗೇಶನ ಬಲಿ ತೆಗೆದುಕೊಂಡಿತ್ತು. ಅದಕ್ಕೆ ಕಾರಣವಾದ ಐನೂರರ ನೋಟು ಪೊನ್ನುಸಾಮಿಯ ಜೇಬಿನಲ್ಲಿ ಭದ್ರವಾಗಿ ಕುಳಿತಿತ್ತು.

**ಕೆ.ಪಿ. ಸತ್ಯನಾರಾಯಣ**

ಮೈಸೂರು ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿ ನಿವೃತ್ತರು. ಚಾರಣ, ಪ್ರವಾಸ, ಛಾಯಾಗ್ರಹಣ, ಸಾಹಿತ್ಯ ಆಸಕ್ತಿಯ ವಿಷಯಗಳು. ಕಳೆದ ಮೂರೂವರೆ ದಶಕಗಳಿಂದ ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಛಾಯಾಚಿತ್ರ, ಚಿತ್ರ ಲೇಖನ, ಹಾಸ್ಯಲೇಖನ, ಲಲಿತ ಪ್ರಬಂಧ, ಸಣ್ಣ ಕತೆಗಳು ಪ್ರಕಟವಾಗಿವೆ. ಇತ್ತೀಚೆಗೆ ಹಾಸ್ಯಲೇಖನಗಳ ಸಂಕಲನ 'ಚುರುಮುರಿ', ಕಥಾಸಂಕಲನ 'ಅಮೂಲ್ಯ ಉಡುಗೊರೆ' ಪ್ರಕಟವಾಗಿವೆ.